1925 (2012) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಕಸಬಾ ಹೋಬಳಿ, ಬಸವನಹಳ್ಳಿ ಗ್ರಾಮದ ಸ.ನಂ. 98/4 ರಲ್ಲಿ ಬಹಳ ಹಿಂದೆ ಹೆಚ್ಚಿನ ಸಂಖ್ಯೆಯ ಪರಿಷ್ಯನರ್‌ಗಳಿರುವ ಚರ್ಚನ್ನು ಕಟ್ಟಿದ್ದು ಮತ್ತು ಈ ಪ್ರದೇಶದಲ್ಲಿ ಮಕ್ಕಳಿಗೂ ಹಾಗೂ ಯುವಕರುಗಳಿಗೆ ಚಾರಿಟೆಬಲ್ ಕೆಲಸಗಳನ್ನು ಮಾಡುತ್ತಿರುವ ಜಾಗವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಭೂ ಸ್ವಾಧೀನಕ್ಕೆ ಒಳಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸ್ವತ್ತು ಭೂ ಸ್ವಾಧೀನವಾಗುವ ಮುನ್ನ ಯಾವುದೇ ಸೂಚನೆಯನ್ನು ಪಡೆಯದೆ ಫಾದರ್ ನಿಕೋಲಸ್ ಡಿಸೋಜ ಇವರ ವಶದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅಧಿಸೂಚನೆಯನ್ನು ಜಾರಿ ಮಾಡದಿರಲು ಕಾರಣಗಳೇನು;

ಈ) ಈ ಜಾಗವು ಪೂಜಾ ಸ್ಥಳವಾಗಿರುವುದರಿಂದ, ಇದನ್ನು ಸರ್ಕಾರ ಏಕೆ ಡಿ ನೋಟಿಫೈ ಮಾಡಬಾರದು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿ) :

ಅ) ಹೌದು. ಈ ಜಮೀನನ್ನು ಭೂ ಸ್ವಾಧೀನಪಡಿಸಲು ಅಧಿಸೂಚನೆ ಹೊರಡಿಸುವ ಸಮಯದಲ್ಲಿ ಯಾವುದೇ ಪ್ರಾರ್ಥನಾ ಮಂದಿರವಾಗಲಿ, ಶಾಶ್ವತ ಕಟ್ಟಡವಾಗಲಿ ಇರಲಿಲ್ಲ.

ಆ) ಸದರಿ ಜಮೀನು ಆರ್.ಟಿ.ಸಿ. ಕಲಂ 9 ಮತ್ತು 12(2) ರಲ್ಲಿ 'ಸರ್ಕಾರ' ಎಂದು ನಮೂದಾಗಿದ್ದು, ಇದಕ್ಕೆ ಸಂಬಂಧಿಸಿದ ನೋಟೀಸ್‌ಗಳನ್ನು ಮೈಸೂರು ತಾಲ್ಲೂಕು ತಹಸೀಲ್ದಾರ್‌ರವರಿಗೆ ಜಾರಿಗೊಳಿಸಲಾಗಿದೆ. ಶ್ರೀ ನಿಕೋಲಸ್ ಡಿಸೋಜರವರ ಹೆಸರು ಆರ್.ಟಿ.ಸಿ. ಕಲಂ 9 ಮತ್ತು 12(2) ರಲ್ಲಿ ಇಲ್ಲದೇ ಇರುವುದರಿಂದ ಇವರಿಗೆ ಭೂ ಸ್ವಾಧೀನ ಕಾಯ್ದೆಯಡಿ ನೋಟೀಸ್ ನೀಡಿರುವುದಿಲ್ಲ.

ಇ) ಮೇಲೆ ನೀಡಿರುವ ವಿವರಣೆಗಳಿಂದ ಶ್ರೀ ಫಾದರ್ ನಿಕೋಲಸ್ ಡಿಸೋಜ ಇವರಿಗೆ ಅಧಿಸೂಚನೆಯನ್ನು ಜಾರಿ ಮಾಡಿರುವುದಿಲ್ಲ.

ಈ) ಈ ಜಮೀನನ್ನು ಭೂ ಸ್ವಾಧೀನಪಡಿಸಲು ಅಧಿಸೂಚನೆ ಹೊರಡಿಸುವ ಸಮಯದಲ್ಲಿ ಯಾವುದೇ ಪ್ರಾರ್ಥನಾ ಮಂದಿರ ಇರಲಿಲ್ಲ. ಭೂ ಸುಧಾರಣಾ ಕಾಯ್ದೆ ಕಲಂ 79 (ಎ ಮತ್ತು ಬಿ) ರ ಉಲ್ಲಂಘನೆಯಾಗಿರುವುದಾಗಿ ಕಂದಾಯ ಉಪ ವಿಭಾಗಾಧಿಕಾರಿಗಳು

ಮಾಡಿರುವ ಆದೇಶವನ್ನು ಕರ್ನಾಟಕ ಕಂದಾಯ ಮೇಲ್ಮನವಿ ನ್ಯಾಯಾಧಿಕಾರಣವು ಆದೇಶ ಸಂಖ್ಯೆ 288/98 ದಿನಾಂಕ : 15.10.99 ರಲ್ಲಿ ವಜಾಗೊಳಿಸಿರುತ್ತದೆ. ಈ ಕಾರಣದಿಂದ ಶ್ರೀ ಫಾದರ್ ನಿಕೋಲಸ್ ಡಿಸೋಜ ಇವರ ಹೆಸರಿಗೆ ಮತ್ತೆ ಕಂದಾಯ ದಾಖಲೆಗಳನ್ನು ಖಾತೆಯನ್ನು ಪುನರ್ ಸ್ಥಾಪಿಸಲಾಗಿದೆ. ಸದರಿಯವರು ಭೂ ಸ್ವಾಧೀನ ಕ್ರಮವನ್ನು ಪ್ರಶ್ನಿಸಿ ಘನ ಉಚ್ಚ ನ್ಯಾಯಾಲಯಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ : 5.2.07 ರಂದು ನೀಡಿದ ತೀರ್ಪಿನಲ್ಲಿ ಪ್ರಾಧಿಕಾರವು ಹೊರಡಿಸಿರುವ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆಯನ್ನು ಎತ್ತಿ ಹಿಡಿದಿದ್ದು, ರಿಟ್‌ದಾರರಿಗೆ ಭೂ ಸ್ವಾಧೀನ ಕಾಯ್ದೆಯ ಕಲಂ 9 ರಡಿ ನೋಟೀಸ್ ನೀಡುವ ಹಂತದಿಂದ ಭೂ ಸ್ವಾಧೀನ ಪ್ರಕ್ರಿಯೆಯನ್ನು ಮುಂದುವರಿಸುವಂತೆ ತೀರ್ಪು ನೀಡಿರುತ್ತದೆ. ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಭೂ ಸ್ವಾಧೀನ ಕಾಯ್ದೆಯ ಕಲಂ 9 ಮತ್ತು 10ರನ್ವಯ ಶ್ರೀ ಫಾದರ್ ನಿಕೋಲಸ್ ಡಿಸೋಜ ಇವರಿಗೆ ದಿನಾಂಕ : 23.3.07 ರಂದು ನೋಟೀಸ್ ಜಾರಿಗೊಳಿಸಿ ದಿನಾಂಕ: 5.4.07 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ.

ಈ ಜಮೀನಿನ ಸುತ್ತಮುತ್ತಲಿನ ಜಮೀನುಗಳೆಲ್ಲವನ್ನೂ ಪ್ರಾಧಿಕಾರದ ಬಡಾವಣೆಗಾಗಿ ಸ್ವಾಧೀನ ಪಡಿಸಿಕೊಂಡು ಕಲಂ 16(2) ರಡಿ ದಿನಾಂಕ : 28.3.05 ರಲ್ಲಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆ ಹೊರಡಿಸಿರುವುದರಿಂದ ಈ ಜಮೀನನ್ನು ಭೂ ಸ್ವಾಧೀನ ಕ್ರಮದಿಂದ ಕೈಬಿಡಲು ಅವಕಾಶವಿರುವುದಿಲ್ಲ.

1926 (2347) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೆಂಟ್ ಕ್ಲಾರೆಟ್ ಸ್ಕೂಲ್, ಜಾಲಹಳ್ಳಿ, ಬೆಂಗಳೂರು ಇದರ ಪ್ರಾಂಶುಪಾಲರಿಗೆ ಮಾರ್ಚ್ 2007ರ ಮೊದಲ ವಾರದಿಂದ ಧಾರ್ಮಿಕ ಸಂಸ್ಥೆಯ ಅಧ್ಯಕ್ಷ ಎನಿಸಿಕೊಂಡ ಒಬ್ಬ ವ್ಯಕ್ತಿಯಿಂದ ಬೆದರಿಕೆ ಕರೆಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೆದರಿಕೆ ಕರೆಗಳನ್ನು ನೀಡುತ್ತಿರುವ ವ್ಯಕ್ತಿ ಕರ್ನಾಟಕದಲ್ಲಿರುವ ಕ್ರೈಸ್ತ ಸಂಸ್ಥೆಗಳನ್ನು ಬಲವಂತವಾಗಿ ಎರಡು ವರ್ಷಗಳ ಒಳಗೆ ಮುಚ್ಚುವುದಾಗಿ ಕರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದು ನಿಜವಾದಲ್ಲಿ ಸರ್ಕಾರ ಈ ವ್ಯಕ್ತಿಯನ್ನು ಪತ್ತೆಹಚ್ಚಿ ದಸ್ತಗಿರಿ ಮಾಡಿ ಈತನ ವಿರುದ್ಧ ಕ್ರಮ ಕೈಗೊಂಡಿದೆಯೇ;